# ಕಡಗ ಕಂಕಣ ಕಟಿಯ ತೊಡರ ಸಮ ಚರಣದ

**(ಸುಳಾದಿ)**

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 122.
2. **Note:** This suladi is not available in other standard books that I referred.

ತಾಳ: ಧ್ರುವ

ಕಡಗ ಕಂಕಣ ಕಟಿಯ ತೊಡರ ಸಮ ಚರಣದ
ಹೇಮವರ್ಣ ಶ್ಯಾಮ ಕೋಮಲಾಂಗ
ಅಹೋ ಗೋಪಿಯರ ಮೋಹಿಸುತ್ತಿದೆ
ಅಹೋ ಜಗಜ್ಜನರ ಪಾಲಿಸುತ್ತಿದೆ
ಪುರಂದರ ವಿಠ್ಠಲನ ಬಾಲ ಲೀಲೆ ॥ ೧ ॥

ತಾಳ: ಮಟ್ಟೆ

ಪೊಂಬಟ್ಟೆಯ ಮೇಲೆ ಕಾಂಚಿಯ ದಾಮ ಗುಡಿಗಟ್ಟಿ
ಜಂಬು-ಚೂತದೆಳದಳಿರುಗಳ ಮುಕುಟ ಮೇಲೆ ಕಟ್ಟಿ
ಕೊಂಬು ಕೊಳಲು ತುತ್ತೂರಿ ಮೌರ್ಯಗಳು
ಭುಂ ಭುಂ ಭುಂ ಭುಂ ಝುಂ ಝುಂ ಝುಂ ಝುಂ
ಎಂಬ ರಾಮಕೃಷ್ಣ ಗೋಪರುಗಳ
ಸಂಭ್ರಮ ಸುರರ ಸೋಲಿಸಿತು ಜಂಭ-ಭೇದಿ ಸ್ವ-
ಯಂಭುವ ಮುಖ್ಯ ಸುರ-ವಂದಿತ ತಿರು-
ವೆಂಗಳಪ್ಪ ಪುರಂದರ ವಿಠ್ಠಲ ರಾಯ ॥ ೨ ॥

ತಾಳ: ತ್ರಿವಿಡೆ

ಜಯ-ಜಯ ಸಿರಿ ನಾರಸಿಂಹ ದುರಿತ ಭಯ ನಿವಾರಣ

ಜಯ-ಜಯ ಸಿರಿ ದಿವ್ಯಸಿಂಹ ಪುರಂದರ ವಿಠ್ಠಲ ರಾಯ ॥ ೩ ॥

ತಾಳ: ಅಟ

ಅಹಂಕಾರ ಮಮಕಾರವಳಿಯದೆ
ವಿಹಂಗ ಗಮನ ಸಿಕ್ಕುವನೆ ಮರುಳೆ ?
ಕಾಮ-ಕ್ರೋಧವ ಬಿಡದನಕ
ಪುರಂದರ ವಿಠ್ಠಲನು ಸುಲಭನೆ ಮರುಳೆ ? ॥ ೪ ॥

ತಾಳ: ಆದಿ

ವಾಮನ ವಾಸುದೇವ ಪದುಮನಾಭ ಹರಿ
ದಾಮೋದರ ನರಹರಿ ಮಾಧವ ಸಿರಿ-ಧರ
ನಾರಾಯಣ ಹರಿ ಸಿರಿ- ವತ್ಸಾಂಕಿತ
ವಾರಿಜ-ದಳ-ಲೋಚನ ಭೂ-ರಮಣ
ಅಚ್ಯುತಾನಂತ ಗೋವಿಂದ ಮುಕುಂದ ಪುರು-
ಷೋತ್ತಮ ಶ್ರೀ ಹರಿ ನಾರಾಯಣ
ಪ್ರದ್ಯುಮ್ನ ಸಂಕರುಷನ ದೇವ ಅನಿ-
ರುದ್ಧ ಪುರಂದರ ವಿಠ್ಠಲ ಸರ್ವೋತ್ತಮ ॥ ೫ ॥

ಜತೆ:

ಕಾಯ-ಕರಣಗಳಿಂದ ಜೀಯ ಕಾಯಬೇಕೆನ್ನ
ಕಾಯ್ದುಕೊಳ್ಳೊ ಪುರಂದರ ವಿಠ್ಠಲ ನೀ ಎನ್ನ ಕಾಯ್ದುಕೊಳ್ಳೆನ್ನ ॥ ೬ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಸುಳಾದಿಯಲ್ಲಿ ಪ್ರಾರಂಭದ ಎರಡು ನುಡಿಗಳಲ್ಲಿ ಶ್ರೀ ಕೃಷ್ಣನ ಬಾಲ ಲೀಲೆ ಇದ್ದು, ಮುಂದೆ ಶ್ರೀ ಕೃಷ್ಣನ ಭಕ್ತಿಯ ವಿಚಾರವನ್ನು ಹೇಳಲಾಗಿದೆ.

**ತೊಡರು** = ಸರಪಳಿ

**ಹೇಮವರ್ಣ ಶ್ಯಾಮ ಕೋಮಲಾಂಗ** = ಶ್ಯಾಮಲ ವರ್ಣವಾಗಿದ್ದರೂ ಕೃಷ್ಣನ ಮೈ ಬಣ್ಣ ಬಂಗಾರದಂತೆ ಹೊಳಪುಳ್ಳದ್ದಿತ್ತು

**ಜಂಭಭೇದಿ** = ಇಂದ್ರ ( ಜಂಭನಿಗೆ ಜಂಭಾಸುರನೆಂಬ ಹೆಸರೂ ಇದೆ. ಇವನು ಬಳಿಯ ಮಿತ್ರ. ಇಬ್ಬರೂ ಕೂಡಿ ಇಂದ್ರನ ಕೂಡ ಯುದ್ಧ ಮಾಡುವಾಗ, ಬಲಿ ಮೂರ್ಛೆ ಹೊಂದಲು, ಈತನು ಸಿಂಹವನ್ನೇರಿ ಇಂದ್ರನೊಡನೆ ಹೋರಾಡಿ, ಅವನಿಂದ ಹತನಾದನು. (ಭಾಗ ೮-೧೧-೧)

**ತಿರುವೆಂಗಳಪ್ಪ** = ಶ್ರೀ ವೆಂಕಟೇಶ

**ವಿಹಂಗ-ಗಮನ** = ಗರುಡಗಮನ, ವಿಷ್ಣು

**Classification:** Suladi
**Name of Suladi:** NA
**Ankita:** purandara vittala
**Location:** NA
**Category:** Krishna Leele
**Sub-Category:** Vishnu, Krishna, bangara, gopi, moha, kolalu, rama, indra, srinivasa, Narasimha, ahankara, garuda, kama, sittu, bali, Vasudeva, Madhava, Narayana, bhumi, achyuta, Ananta, govinda, hari sarvottama
**Pravachana:** NA
**Explanation:** NA